೧	೨	೩
	೪೭೬ ಹನುಮಪ್ಪ	೭೫–೦೦
	೪೭೭ ಗೌಡ್ರ ನಾಗರಾಜ	೫೦–೦೦
೫೫. ಮಾಚಿಹಳ್ಳಿ	೪೭೮ ಶ್ರೀಮತಿ ಪ್ರೇಮಕ್ಕ	೩೦೦–೦೦
೫೬. ನಿಟ್ಟೂರು	೪೭೯ ತೂರಿ ಗುಡ್ಡಪ್ಪ	೨೦೦–೦೦
		೬೪೪೭೫–೦೦

ರಾಜ್ಯದಲ್ಲಿ ನೋಂದಣಿ ಮಾಡಿಕೊಂಡ ಪದವೀಧರರ ನಿರುದ್ಯೋಗಿಗಳು

೩೬೯(೭೬೨) ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೊಂದಣಿ ಮಾಡಿಕೊಂಡ ಪದವೀಧರ ನಿರುದ್ಯೋಗಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

೯೯,೧೫೩.

ಗುಬ್ಬಿ ತಾಲ್ಲೂಕು ಸಿ. ಎಸ್. ಪುರ ಕೆರೆಯು ಕೋಡಿಹಳ್ಳಕ್ಕೆ ಕಟ್ಟಲಾದ ಆಣೆಯ ಬಗ್ಗೆ

೩೭೨(೭೫೧) ಶ್ರೀ ಜಿ. ಎಸ್. ಶಿವಸಂಜಪ್ಪ (ಗುಬ್ಬಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಗುಬ್ಬಿ ತಾಲ್ಲೂಕು ಸಿ. ಎಸ್. ಪುರ ಹೋಬಳಿಯ ಸಿ. ಎಸ್. ಪುರ ಕೆರೆಯ ಕೋಡಿಹಳ್ಳಕ್ಕೆ ಜಿನ್ನೇನಹಳ್ಳಿಯ ಹತ್ತಿರ ಕಟ್ಟಲಾಗಿದ್ದ ನಿರಾವರಿ ಆಣೆಕಟ್ಟು ಒಡೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದಲ್ಲಿ, ಈ ಆಣೆಯಿಂದ ಎಷ್ಟು ಎಕರೆ ತರಿ ಜಮೀನಿಗೆ ನೀರು ಒದಗಿಸಲಾಗುತ್ತಿತ್ತು, ಈಗ ಸದರಿ ಜಮೀನಿಗೆ ಏಲ್ಲಿಂದ ನೀರನ್ನು ಒದಗಿಸಲಾಗುತ್ತಿದೆ?

ಇ) ಒಡೆದು ಹೋಗಿರುವ ಆಣೆಯನ್ನು ಯಾವಾಗ ದುಸ್ತಿ ಮಾಡಲಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಬಂದಿದೆ.

ಆ) ೫೪ ಎಕರೆ ೨೧ ಗುಂಟೆ ತರೀ ಜಮೀನಿಗೆ ಈ ಕೆರೆಯಿಂದ ನೀರನ್ನು ಒದಗಿಸಲಾಗುತ್ತಿತ್ತು. ಈಗ ಚಂದ್ರಶೇಖರಪುರ ಕೆರೆಯ ಬಲದಂಡೆ ಕಾಲುವೆಯಿಂದ ನಿರೊದಗಿಸಲಗುತ್ತಿದೆ.

ಇ) ಆಣೆಯ ದುರಸ್ತಿ ಕಾಮಗಾರಿಯನ್ನು ಆದಷ್ಟು ಬೇಗ ತೆಗೆದುಕೊಳ್ಳಲಾಗುವುದು.